**ದಿಃ 22-11-2023 ರಂದು 2 ನೇ ಆರೋಪಿ ಪರ ಸಲ್ಲಿಸಿದ ಅರ್ಜಿ ಮೇಲೆ ಆದೇಶ**

2 ನೇ ಆರೋಪಿ ಪರ ವಕೀಲರು ಪ್ರಸ್ತುತ ಅರ್ಜಿ ಸಲ್ಲಿಸಿ ಜಾಮೀನು ಮಂಜೂರಿ ಮಾಡುವಲ್ಲಿ ವಿಧಿಸಿದ ಶರತ್ತುಗಳು ವಿನಾಯಿತಿಗೊಳಿಸುವಂತೆ ಈಗಾಗಲೇ ಜಿಲ್ಲಾ ಕಾನೂನು ಸೇವಾ ಸಮಿತಿಯಲ್ಲಿ ಇರುವ ಯುಟಿ ಆರ್ ಸಿ ಕಮಿಟಿಯವರು ನಿರ್ಧರಿಸಿದ್ದು 2 ನೇ ಆರೋಪಿಗೆ ಜಾಮೀನು ನೀಡುವ ಸಮಯದಲ್ಲಿ ವಿಧಿಸಿದ ಶರತುಗಳನ್ನು ಸಡಿಲಿಸಲು ವಿನಂತಿಸಿರುತ್ತಾರೆ.

**2.** ಸದರಿ ಅರ್ಜಿಗೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ತಕರಾರು ಸಲ್ಲಿಸಿ ಆರೋಪಿ ಭಾರತ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಅಪರಾಧ ಎಸಗಿರುವುದಾಗಿ ಈಗಾಗಲೇ ದೋಷಾರೋಪಣಾ ಪತ್ರ ಸಲ್ಲಿಸಲಾಗಿದೆ. ಸದರಿ ಆರೋಪಿ ರೂಢಿಗತ ಕಳ್ಳನಿದ್ದು, ಅದನ್ನೇ ತನ್ನ ಕಸುಬನ್ನಾಗಿ ಮಾಡಿಕೊಂಡಿದ್ದು, ಬೇರೆ ಬೇರೆ ಠಾಣೆಗಳಲ್ಲಿ ಪ್ರಕರಣ ಬಾಕಿ ಇರುತ್ತವೆ. ಒಂದು ವೇಳೆ ಆತನಿಗೆ ವಿಧಿಸಿದ ಜಾಮೀನಿನ ಶರತ್ತುಗಳನ್ನು ಸಡಿಲಿಕೆ ಮಾಡಿ ಬಿಡುಗಡೆಗೊಳಿಸಿದರೆ ಆತ ತಲೆಮರೆಸಿಕೊಳ್ಳುವ ಸಾಧ್ಯತೆ ಇರುತ್ತದೆ ಹಾಗೂ ಕಳ್ಳತನ ಪ್ರಕರಣಗಳಲ್ಲಿ ಪುನಃ ಭಾಗಿಯಾಗುವ ಸಾಧ್ಯತೆ

ಇರುತ್ತದೆ. ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**3.** ಸದರಿ ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**<u>ಅಂಶಗಳು</u>**

1. ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು 2 ನೇ ಆರೋಪಿ ಅರ್ಹನಿರುತ್ತಾನೆಯೇ?
2. ಯಾವ ಆದೇಶ ?

**4.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**<u>ಕಾರಣಗಳು</u>**

**5.** **<u>ಅಂಶ ನಂ.1</u>**:- ದಿಃ 30-7-2023 ರ ರಾತ್ರಿ 1-8 ಕ್ಕೆ ವಂದಿಗೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ 66 ರ ರಸ್ತೆಯ ಬದಿ ಫಿರ್ಯಾದಿಯ ನಿರ್ಮಾಣ ಹಂತದ ಅಂಗಡಿ ಮುಂದೆ ನಿಲ್ಲಿಸಿದ ಹಿರೋ ಹೊಂಡಾ

ಸ್ಪೆಂಡರ್ ಕಂಪನಿಯ ಮೋಟಾರ್ ಸೈಕಲ್ ನಂ. ಕೆಎ-30/ಜೆ-1085 ನ್ನು ಅಕ್ರಮ ಲಾಭ ಹೊಂದುವ ಉದ್ದೇಶದಿಂದ 1 ನೇ ಆರೋಪಿಯೊಂದಿಗೆ ಸೇರಿ ಕಳುವು ಮಾಡಿರುವುದಾಗಿ 2 ನೇ ಆರೋಪಿ ಮೇಲೆ ತನಿಖಾಧಿಕಾರಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ. ಸದರಿ ಆರೋಪಿ ವಿವಿಧ ಪ್ರಕರಣಗಳಲ್ಲಿ ಬಾಗಿಯಾಗಿರುತ್ತಾರೆಂದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ತಮ್ಮ ವಾದದಲ್ಲಿ ತಿಳಿಸಿದರೂ ಸಹ ಅದಕ್ಕೆ ಪೂರಕವೆಂಬಂತೆ ಯಾವುದೇ ದಾಖಲೆಗಳನ್ನು ವ, ಪ್ರಕರಣಗಳ ಸಂಖ್ಯೆಗಳನ್ನು ಅಥವಾ ಈ ಹಿಂದೆ ಆರೋಪಿ ಶಿಕ್ಷೆಗೆ ಒಳಪಟ್ಟಿರುತ್ತಾನೆ ಎಂಬುವುದರ ಕುರಿತು ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸಿರುವುದಿಲ್ಲ.

**6.** ಆರೋಪಿ ಎಸಗಿದ ಅಪರಾಧವು ಫಿರ್ಯಾದಿದಾರನ ಸಮ್ಮತಿ ಮೇರೆಗೆ ರಾಜಿಗೆ ಒಳಪಡುವಂತಹ ಪ್ರಕರಣವಿರುತ್ತದೆ. ಆರೋಪಿಗೆ ದಿಃ 7-9-2023 ರಂದು ಜಾಮೀನು ಮಂಜೂರಿ ಮಾಡಿದ್ದು, ಇದುವರೆಗೂ ಸಹ ಆತನಿಗೆ ಜಾಮೀನು ಅರ್ಜಿ ಪುರಸ್ಕರಿಸುವ ಸಮಯದಲ್ಲಿ ವಿಧಿಸಿದ ಶರತ್ತುಗಳನ್ನು ಪೂರೈಸಲು ಆಗಿರುವುದಿಲ್ಲ. ಕಾರಣ ಸದರಿ 2 ನೇ ಆರೋಪಿಗೆ ಜಾಮೀನುದಾರರನ್ನು ಹೊಂದಿಸುವಷ್ಟು ಆರ್ಥಿಕ ಸಮರ್ಥತೆ ಹೊಂದಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಕಾರಣ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

**7.** **<u>ಅಂಶ ನಂ.2ಃ</u>** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**<u>ಆದೇಶ</u>**

2 ನೇ ಆರೋಪಿ ಪರ ದಿಃ 22-11-2023 ರಂದು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ .

ದಿಃ 7-9-2023 ರಂದು 2 ನೇ ಆರೋಪಿಯ ಕುರಿತಾಗಿ ಮಂಜೂರಿಯಾದ ಜಾಮೀನು ಅರ್ಜಿಯಲ್ಲಿ ವಿಧಿಸಿದ ಶರತ್ತನ್ನು ಸಡಿಲಗೊಳಿಸಿ 2 ನೇ ಆರೋಪಿಯನ್ನು ರೂ. 20,000/- ವಯಕ್ತಿಕ ಬಾಂಡ್ ಬರೆದುಕೊಡುವಂತೆ ಹಾಗೂ ಉಳಿದ ಕರಾರುಗಳನ್ನು ಪಾಲಿಸುವಂತೆ ತಿಳಿಸಿ ವಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಸದರಿ ಮಾಹಿತಿಯನ್ನು ಜೈಲು ಅಧಿಕಾರಿಗೆ ಕೂಡಲೇ ರವಾನೆ ಮಾಡಲು ಕಚೇರಿಗೆ ಈ ಮೂಲಕ ಆದೇಶಿಸಲಾಗಿದೆ.

sd/-

**ಪ್ರ.ದ.ನ್ಯಾದಂ, ಅಂಕೋಲಾ.**